**ದಿನಾಂಕಃ 18.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಪ್ರಸ್ತುತ ದಾವೆಯಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ಪ್ರಮಾಣ ಪತ್ರದ ಅಂಶಗಳನ್ನು ಓದಿ ತಿಳಿದುಕೊಂಡು ನಂತರ ಸಹಿ ಮಾಡಿರುತ್ತೇನೆಂದರೆ ಸರಿ. 4ನೇ ಪ್ರತಿವಾದಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆಂದರೆ ಸರಿ. ಎಲ್ಲಾ ದಿನಾಂಕಗಳಲ್ಲಿಯೂ ಅವರು ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದಾರೆಂದರೆ ಸರಿ. 4ನೇ ಪ್ರತಿವಾದಿಗೆ ಸಾಕ್ಷ್ಯವನ್ನು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಕಿವಿ ಕೇಳಿಸುವುದಿಲ್ಲ ಎಂದು ನಾನು ಯಾವುದೇ ದಾಖಲಾತಿ ಅಥವಾ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. 4ನೇ ಪ್ರತಿವಾದಿಯು ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದ ಪತ್ರ ಹಾಕಿರುತ್ತಾರೋ ಇಲ್ಲವೋ ಎಂಬುದಾಗಿ ನಾನು ತಿಳಿದುಕೊಂಡಿರುತ್ತೇನೆ. 4ನೇ ಪ್ರತಿವಾದಿಯು ಪ್ರಸ್ತುತ ಪ್ರಕರಣದಲ್ಲಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

2. 4ನೇ ಪ್ರತಿವಾದಿಯು ನನಗೆ ಸದರಿ ದಾವೆಯಲ್ಲಿ ಅವರ ಪರ ಹಾಜರಾಗಿ ಸಾಕ್ಷ್ಯವನ್ನು ನೀಡಲು ಅಧಿಕಾರ ಪತ್ರವನ್ನು ನೀಡಿದ್ದು ಅದು ಯಾವ ದಿನಾಂಕ ಮತ್ತು ಯಾವ ಪತ್ರ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ 4ನೇ ಪ್ರತಿವಾದಿಯು ಯಾವುದೇ ಜಿಪಿಎ ಕೊಟ್ಟಿರುವುದಿಲ್ಲ ಆದಕಾರಣ ನಾನು ಸಾಕ್ಷ್ಯವನ್ನು ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಕಡತದಲ್ಲಿ ಜಿಪಿಎ ದಾಖಲೆಯು ಇರುವುದಿಲ್ಲ ಸಾಕ್ಷಿಯು ತನ್ನ ಪರವಾಗಿ ಎಸ್ ಪಿ ಎ ದಾಖಲೆಯನ್ನು ಹಾಜರು ಪಡಿಸಿದ್ದು ಈ ಹಂತದಲ್ಲಿ 4ನೇ ಪ್ರತಿವಾದಿಯ ಪರ ವಕೀಲರು ಸದರಿ ಸಾಕ್ಷ್ಯವನ್ನು ಅನುರ್ಜಿತಗೊಳಿಸುವಂತೆ ಕೋರಿದ್ದು ಅದರಂತೆ ಈ ಹಂತದಲ್ಲಿ ಕಡತದ ಅನ್ವಯ ಸದರಿ ಸಾಕ್ಷ್ಯವನ್ನು ಅನುರ್ಜಿತಗೊಳಿಸಲಾಯಿತು.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**